ಮೇಲ್ಕಂಡ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾದ ನಂತರ ನಿಯಮಾನುಸಾರ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.

ಈ) ಸರ್ಕಾರದ ಆದೇಶ ಸಂಖ್ಯೆ: ಸಕಇ 57 ಎಸ್‌ಎಲ್‌ಪಿ 2011, ದಿನಾಂಕ: 10.10.2011 ರನ್ವಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಾಲೋನಿ ಅಭಿವೃದ್ಧಿ ಕಾಮಗಾರಿಗಳ ಗುಣಮಟ್ಟವನ್ನು ಮೂರನೇ ಪಾರ್ಟಿಯವರಿಂದ ತಪಾಸಣೆ ಮಾಡಿಸಲು ಅವಕಾಶವಿದ್ದು ಅದರಂತೆ ಕ್ರಮ ವಹಿಸಲಾಗುವುದು.

ಉ) ಮತ್ತು ಊ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿಗಳ ಅಭಿವೃದ್ಧಿಗಾಗಿ ಮೂಲಭೂತ ಸೌಕರ್ಯ ಒದಗಿಸಲು ಮತ್ತು ಡಾ॥ ಬಿ.ಆರ್.ಅಂಬೇಡ್ಕರ್/ಡಾ॥ ಬಾಬು ಜನಜೀವನರಾಂ/ವಾಲ್ಮೀಕಿ ಭವನ/ಸಮುದಾಯ ಭವನಗಳ ನಿರ್ಮಾಣ ಕಾಮಗಾರಿ ಸಂಬಂಧಿಸಿದಂತೆ ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯ ನಿರ್ಣಯದಂತೆ ಸೂಕ್ತ ಕ್ರಮ ವಹಿಸಲಾಗುವುದು.

ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮಂಜೂರಾತಿ

3826(4427); ಡಾ॥ ಉಮೇಶ್ .ಜಿ. ಜಾಧವ್ (ಚಿಂಚೋಳಿ)

ಅ) ಗುಲಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಕೊರತೆಯಿರುವುದರಿಂದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಷ್ಟು ಕಾಲ ಮಿತಿಯೊಳಗೆ ವಸತಿ ಶಾಲೆಗಳಿಗೆ ಮಂಜೂರಾತಿ ನೀಡಲಾಗುವುದು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ)

ಅ) ಗುಲಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಮೂಲಭೂತ ಸೌಕರ್ಯದ ಕೊರತೆ ಇರುವುದು

ಕಂಡು ಬಂದಿದ್ದು, ಸಂಘದ ಸುತ್ತೋಲೆ ಸಂಖ್ಯೆ:ಕವಶಿಸಸ/ಯೋಜನೆ(2)/ಸಿಆರ್(2)–137/2013–14, ದಿ:05–04–2014ರಲ್ಲಿ ಮೂಲಭೂತ ಸೌಕರ್ಯ ಇರುವ ಸುಸಜ್ಜಿತ ಕಟ್ಟಡ ಹುಡುಕಿ ವಸತಿ ಶಾಲೆಯನ್ನು ಸ್ಥಳಾಂತರಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮತ್ತು ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.

ಪ್ರಾಂಶುಪಾಲರು, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಕೊಡ್ಲಿ ಗ್ರಾಮ, ಚಿಂಚೋಳಿ ತಾಲ್ಲೂಕು ರವರು ಈ ವಸತಿ ಶಾಲೆಗೆ ಮತ್ತೊಂದು ಬಾಡಿಗೆ ಕಟ್ಟಡವನ್ನು ಪಡೆದು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕ್ರಮವಹಿಸಿರುತ್ತಾರೆ. ಸದರಿ ವಸತಿ ಶಾಲೆಯನ್ನು ನಡೆಸಲು 3 ಕಟ್ಟಡಗಳನ್ನು ಪಡೆಯಲಾಗಿದ್ದು ಪ್ರಾಂಶುಪಾಲರಿಗೆ 1 ಕೋಣೆ, ಶಿಕ್ಷಕರಿಗೆ 1 ಕೋಣೆ, ತರಗತಿ ನಡೆಸಲು 5 ಕೋಣೆ, 9 ಕೋಣೆಗಳು ವಿದ್ಯಾರ್ಥಿಗಳ ವಾಸ್ತವ್ಯಕ್ಕೆ, ದಾಸ್ತಾನು ಶೇಖರಿಸಲು 1 ಕೋಣೆ, 3 ಚಿಕ್ಕ ಮತ್ತು 1 ದೊಡ್ಡ ಕೋಣೆ ಅಡುಗೆ ಮನೆಗಾಗಿ, 6 ಸ್ನಾನಗೃಹಗಳು ಮತ್ತು 5 ಶೌಚಾಲಯಗಳ ಅನುಕೂಲ ಕಲ್ಪಿಸಲು ಕ್ರಮವಹಿಸಲಾಗಿದೆ.

ಚಿಮ್ಮನಜೋಡು, ಕೊಡ್ಲಿ ಕ್ರಾಸ್ ಸರ್ವೆ ನಂ 110 ರಲ್ಲಿ 15 ಎಕರೆ ಸರ್ಕಾರಿ ಜಮೀನು ಮಂಜೂರಾಗಿರುತ್ತದೆ. ಸದರಿ ವಸತಿ ಶಾಲೆಯ ಸಂಕೀರ್ಣ ನಿರ್ಮಾಣಕ್ಕಾಗಿ ಅಂದಾಜು ತಯಾರಿಸಲು ಪಿ.ಎಂ.ಸಿ. ಗೆ ವಹಿಸಲಾಗಿದೆ. ಅಂದಾಜು ಪಡೆದು ಸಂಕೀರ್ಣ ನಿರ್ಮಾಣಕ್ಕೆ ತ್ವರಿತವಾಗಿ ಕ್ರಮವಹಿಸಲಾಗುವುದು.